ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಗೊಟ್ಟಿಗೆರೆ ವಾರ್ಡ್ ಸಂಖ್ಯೆ-194,

ವಾರ್ಡ್ ಕಛೇರಿಯಲ್ಲಿ ದಿನಾಂಕ: 16-02-2022 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

| ಹಾಜರಿದ್ದವರು |
|---|
| 1. ಅಧ್ಯಕ್ಷರು, ಗೊಟ್ಟಿಗೆರೆ, ವಾರ್ಡ್ ಸಮಿತಿ, ಬೊಮ್ಮನಹಳ್ಳಿ, ಬೆಂಗಳೂರು.<br>2. ಹಿರಿಯ ಆರೋಗ್ಯ ಪರಿವೀಕ್ಷಕರು ಹಾಗೂ ಕಾರ್ಯದರ್ಶಿ, ವಾರ್ಡ್ ನಂ.194, ಗೊಟ್ಟಿಗೆರೆ.<br>3. ವಾರ್ಡ್ ಸಹಾಯಕ ಅಭಿಯಂತರರು ವಾರ್ಡ್ ನಂ.194, ಗೊಟ್ಟಿಗೆರೆ<br>4. ಆರೋಗ್ಯಾಧಿಕಾರಿಗಳು, ಗೊಟ್ಟಿಗೆರೆ.<br>5. ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ 194, ಗೊಟ್ಟಿಗೆರೆ.<br>6. ಕಿರಿಯ ಅಭಿಯಂತರರು (ಬೆಸ್ಕಾಂ), ಗೊಟ್ಟಿಗೆರೆ.<br>7. ತೋಟಗಾರಿಗೆ ಸಹಾಯಕರು, ಗೊಟ್ಟಿಗೆರೆ<br>ಸ್ಥಳೀಯ ಸಂಘ ಸದಸ್ಯರು:-<br>1. ಅಧ್ಯಕ್ಷರು, ರಾಯಲ್ ಕೌಂಟ, ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್, ಗೊಟ್ಟಿಗೆರೆ.<br>2. ಅಧ್ಯಕ್ಷರು, ಕ್ಲಾಸಿಕ್ ಆರ್ಚರ್ಡ್ಸ್.<br>3. ಅಧ್ಯಕ್ಷರು, ಹಿಮಗಿರಿ ಮೆಡೋಸ್, ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್, ಗೊಟ್ಟಿಗೆರೆ.<br>4. ಅಧ್ಯಕ್ಷರು, ಜೆ.ಪಿ ನಗರ, 9ನೇ ಹಂತ, 7ನೇ ಬ್ಲಾಕ್ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್, ಗೊಟ್ಟಿಗೆರೆ.<br>5. ಅಧ್ಯಕ್ಷರು, ಪರಿವರ್ತನ ಸಂಘ, ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್, ಗೊಟ್ಟಿಗೆರೆ<br><br>ಗೈರುಹಾಜರಿ<br>1. ಸಹಾಯಕ ಕಾರ್ಯಪಾಲಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ)<br>2. ಸಹಾಯಕ ಕಾರ್ಯಪಾಲಕ ಅಭಿಯಂತರರು (ಬೆಸ್ಕಾಂ), ಗೊಟ್ಟಿಗೆರೆ |

ದಿನಾಂಕ: 16-02-2022 ರಂದು ಮಧ್ಯಾಹ್ನ 03:00 ಘಂಟೆಗೆ ನಡೆಸಲಾದ ವಾರ್ಡ್ ಸಮಿತಿ ಸಭೆಯಲ್ಲಿ ಅಧ್ಯಕ್ಷರು ಸಭೆಯಲ್ಲಿ ಎಲ್ಲರನ್ನು ಸ್ವಾಗತಿಸುತ್ತಾ, ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಿಲಾಯಿತು.

**1. ಕೋವಿಡ್-19 ಸಂಬಂಧ ಸೋಂಕು ಹರಡುವುದನ್ನು ತಡೆಗಟ್ಟುವ ಸಂಬಂಧ ತೆಗೆದುಕೊಳ್ಳಬೇಕಾದ ಮುಂಜಾಗ್ರತ ಬಗ್ಗೆ.**

(1) ವಾರ್ಡ್ ವ್ಯಾಪ್ತಿಯಲ್ಲಿ 4 ಮಾದರಿ ಸಂಗ್ರಹಣೆ ತಂಡಗಳು ಕರ್ತವ್ಯ ನಿರ್ವಹಿಸುತ್ತಿದ್ದು, ದೈನಂದಿನ ಸಂಗ್ರಹಣೆಯ ಗುರಿಯ ಅನುಸಾರ ಸಂಗ್ರಹಿಸಲಾಗುತ್ತಿದೆ. ಒಟ್ಟು 37 ಸಕ್ರಿಯ ಪ್ರಕರಣಗಳು , 04-05 ಪ್ರಕರಣಗಳೂ ಪ್ರತಿ ದಿನ ಇರುತ್ತದೆ ಎಂದು ವೈದ್ಯರು ತಿಳಿಸಿದರು.

(2) ಲಸಿಕಾ ಕಾರ್ಯಕ್ರಮವನ್ನು ವಾರ್ಡ್ ನ ಎಲ್ಲಾ ಸ್ಥಳಗಳಲ್ಲಿ ನಿವಾಸಿಗಳ ಸಂಘ ಸಂಸ್ಥೆಗಳ ಸಹಕಾರದೊಂದಿಗೆ ನಡೆಸಲಾಗುತ್ತಿದೆ. ತಮ್ಮ ಬಡಾವಣೆ / ಅಪಾರ್ಟ್‌ಮೆಂಟ್ ಗಳಲ್ಲಿ ಲಸಿಕಾ ಶಿಬಿರ ನಡೆಸಲು ಆರೋಗ್ಯಾಧಿಕಾರಿಗಳನ್ನು ಸಂಪರ್ಕಿಸಲು ತಿಳಿಸಲಾಯಿತು.

Scanned by CamScanner

2. ಘನತ್ಯಾಜ್ಯ ನಿರ್ವಹಣೆಯ ಬಗ್ಗೆ.

(I) ಜಂಬೂ ಸವಾರಿ ದಿಣ್ಣೆಯಲ್ಲಿ ಆಟೋ ಟಿಪ್ಪರ್ ಗಳ ಕೊರತೆ ಇರುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ಹೆಚ್ಚುವರಿ ಆಟೋ ಟಿಪ್ಪರ್ ಗಳನ್ನು ಒದಗಿಸಲು ಈಗಾಗಲೇ ಪ್ರಸ್ತಾಪಿಸಲಾಗಿರುವ ಬಗ್ಗೆ ಹಿರಿಯ ಆರೋಗ್ಯ ಪರೀವೀಕ್ಷಕರು ತಿಳಿಸಿರುತ್ತಾರೆ. ಹೆಚ್ಚುವರಿ ಆಟೋ ಟಿಪ್ಪರ್ ಗಳನ್ನು ಒದಗಿಸುವವರೆಗೂ ಪ್ರಸ್ತುತ ಲಭ್ಯವಿರುವ ಆಟೋ ಟಿಪ್ಪರ್ ಗಳನ್ನು ಸಮರ್ಪಕವಾಗಿ ಬಳಸಲು ಸೂಚಿಸಲಾಯಿತು.

(II) ಕ್ಲಾಸಿಕ್ ಆರ್‌ಚಿಡ್ಸ್ ಲೊಯಲಾ ಗೇಟ್ ಬಳಿ ರಸ್ತೆಬದಿಯಲ್ಲಿ ತ್ಯಾಜ್ಯ ಇರುವ ಕಾರಣ ಸಂಚಾರ ಮಾಡುವ ದ್ವಿಚಕ್ರ ವಾಹನಗಳು ಸ್ಕಿಡ್ ಆಗುತ್ತಿರುವುದು ಕಂದುಬಂದಿದ್ದು, ಈ ಸಂಬಂಧ ಹಿರಿಯ ಆರೋಗ್ಯ ಪರೀವೀಕ್ಷಕರು ಕೂಡಲೇ ತಾಜ್ಯವನ್ನು ತೆರವುಗೊಳಿಸಲು ಸೂಚಿಸಲಾಯಿತು.

(III) ಸುರಭಿನಗರ ಸುತ್ತಮುತ್ತ ಪ್ರದೇಶಗಳಲ್ಲಿ ಘನತ್ಯಾಜ್ಯವನ್ನು ತೆರವುಗೊಳಿಸಲು ಆರೋಗ್ಯ ಪರಿವೀಕ್ಷಕರಿಗೆ ತಿಳಿಸಲಾಯಿತು.

3. ವಾರ್ಡ್ ವ್ಯಾಪ್ತಿಯಲ್ಲಿ ವಿದ್ಯುತ್ ಸರಬರಾಜು ಸಂಬಂಧಿಸಿದ ವಿಷಯಗಳ ಬಗ್ಗೆ.

(I) ಗೊಟ್ಟಿಗೆರೆ ವಾರ್ಡ್ ವ್ಯಾಪ್ತಿಯಲ್ಲಿ ಭೂಗತ ಕೇಬಲ್ ಕಾಮಗಾರಿ ಚಾಲ್ತಿಯಲ್ಲಿದ್ದು, ಸುಮಾರು ಮಾರ್ಚ್ ತಿಂಗಳ ಅಂತ್ಯದೊಳಗೆ ಮುಕ್ತಾಯಗೊಳ್ಳುವುದಾಗಿ ಕಿರಿಯ ಅಭಿಯಂತರರು (ಬೆಸ್ಕಾಂ) ರವರು ತಿಳಿಸಿದರು.

(II) ಹಿಮಗಿರಿ ಮೆಡೋಸ್ ಬಡಾವಣೆಯಲ್ಲಿ Cabling ಕಾರ್ಯವನ್ನು ಪೂರ್ಣಗೊಳಿಸಿರುವುದಾಗಿ ಸಭೆಗೆ ತಿಳಿಸಿದರು. ಸದರಿ ಬಡಾವಣೆಯಲ್ಲಿ ಟ್ರಾನ್ಸ್‌ಫಾರ್ಮರ್ ದುರಸ್ಥಿ ಕಾರ್ಯವನ್ನು ಕೂಡಲೆ ಪೂರ್ಣಗೊಳಿಸಲು ಅಧ್ಯಕ್ಷರು ಹಿಮಗಿರಿ ಮೆಡೋಸ್ ಕೋರಿದ್ದು, ಅಗತ್ಯ ಕ್ರಮ ವಹಿಸಲು ಸೂಚಿಸಲಾಯಿತು.

4. **ಬಿ.ಡಬ್ಲ್ಯೂ.ಎಸ್.ಎಸ್.ಬಿ ಗೆ ಸಂಬಂಧಿಸಿದ ವಿಷಯಗಳ ಬಗ್ಗೆ** ಮಾಹಿತಿ ಒದಗಿಸಲು BWSSB ಸಂಸ್ಥೆಯಿಂದ ಅಭಿಯಂತರರು ಸಭೆಗೆ ಹಜರಾಗಿರುವುದಿಲ್ಲ. ಸಭೆಯ ವೇಳೆ ದೂರವಾಣಿ ಕರೆಯಲ್ಲಿ ಸದರಿ ಆನ್ ಲೈನ್ ಸಭೆಗೆ ಹಾಜರಾಗಲು ಸೂಚನೆ ನೀಡಿದರೂ ಸಹ ಹಾಜರಾಗದೇ ಇರುವುದು ಸಮಂಜಸವಲ್ಲ ವಾದರಿಂದ ಅಭಿಯಂತರಿಗೆ ನೋಟಿಸ್ ಜಾರಿಗೊಳಿಸಲು ಸೂಚಿಸಲಾಯಿತು.

5. ರಾಯಲ್ ಕೌಂಟಿ ಬಡಾವಣೆಯಲ್ಲಿ ವಾರ್ಡ್ ಕಛೇರಿ ಎದಿರು ಇರುವ ಖಾಲಿ ನಿವೇಶನದಲ್ಲಿ ಗಿಡಗಳನ್ನು ತೆರವುಗೊಳಿಸುತ್ತಿರುವ ಬಗ್ಗೆ ಹಾಗೂ ಸದರಿ ನಿವೇಶನವು ದಾವೆಯಲ್ಲಿರುವ ಬಗ್ಗೆ ಪರಿವರ್ತನಾ ಸಂಘದ ಅಧ್ಯಕ್ಷರು ತಿಳಿಸಿದರು. ಈ ಬಗ್ಗೆ ಅರಣ್ಯ ಅಧಿಕಾರಿಗಳು ಈಗಾಗಲೇ ಸ್ಥಳ ಪರಿಶೀಲಿಸಿ ನಿವೇಶನಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಪಡೆದಿರುವುದಾಗಿ ಮಾಹಿತಿ ಸಲ್ಲಿಸಿದರು. ಸದರಿ ದಾಖಲೆಗಳನ್ನು ಕಂದಾಯ ಶಾಖೆಗೆ ನೀಡಲು ಸೂಚಿಸುತ್ತಾ ಸಭೆಯಲ್ಲಿ ಹಾಜರಿದ್ದ ವಾರ್ಡ್ ಕಂದಾಯ ನೀರೀಕ್ಷರು ಹಾಗೂ ಅಭಿಯಂತರರು ಪರಿಶೀಲಿಸಿ ನಿಯಮಾನುಸಾರ ಅಗತ್ಯ ಕ್ರಮ ವಹಿಸಲು ಸೂಚಿಸಲಾಯಿತು.

6. ರಾಯಲ್ ಕೌಂಟಿ ಬಡಾವಣೆಯಲ್ಲಿ ಕಳ್ಳತನ ಹೆಚ್ಚಾಗುತ್ತಿರುವ ಬಗ್ಗೆ ಪರಿವರ್ತನಾ ಸಂಘದ ಅಧ್ಯಕ್ಷರು ಈಗಾಗಲೇ ಪೋಲೀಸ್ ಠಾಣೆಯಲ್ಲಿ ದೂರು ಸಲ್ಲಿಸಲು ಹೋಗಿದ್ದು ದೂರು ದಾಖಲಾಗದಿರುವ ಬಗ್ಗೆ ತಿಳಿಸಿದರು. ಸಭೆಯಲ್ಲಿ ಹಾಜರಿದ್ದ ಸಬ್

Scanned by CamScanner

ಇನ್ಸಪೇಕ್ಟರ್ ಶ್ರೀ ಪ್ರವೀಣ್ ರಾಜ್ ರವರು ತಮ್ಮ ದೂರವಾಣಿ ಸಂಖ್ಯೆಯನ್ನು ಹಂಚಿಕೊಂಡು ಸಮಸ್ಯೆ ಬಂದಲ್ಲಿ ತಮ್ಮನ್ನು ಅಥವಾ ಠಾಣೆಯಲ್ಲಿ ನಮೂದಿಸಿರುವ ಸಹಾಯವಾಣಿಗೆ ಕರೆಮಾಡಲು ತಿಳಿಸಿದರು.

7. ಬೋರಾ ಲೇಔಟ್, ಸೌತ್ ಅವೆನ್ಯೂ ಬಡಾವಣೆ, ಕೆಂಬತ್ತಾಹಳ್ಳಿ ರಸ್ತೆ, ಜ್ಯೋತಿ ನಗರ, ಸುರಭಿ ನಗರ ಹಾಗೂ ಗೊಟ್ಟಿಗೆರೆ ಮುಖ್ಯ ಭಾಗದಲ್ಲಿ ವಿವಿಧ ಕಾಮಗಾರಿಗಳ ಅವಶ್ಯಕತೆ ಇರುವ ಬಗ್ಗೆ ಅಧ್ಯಕ್ಷರು, ಕ್ಲಾಸಿಕ್ ಆರಚಿಡ್ಸ್ ರವರು ಪಟ್ಟಿಯನ್ನು ಸಲ್ಲಿಸಿರುತ್ತಾರೆ. ಈ ಸಂಬಂಧ ವಾರ್ಡ್ ಅಭಿಯಂತರು ಸ್ಥಳ ಪರಿಶೀಲಿಸಿ ನಿಯಮಾನುಸಾರ ಅಗತ್ಯ ಕ್ರಮವಹಿಸಲು ಸೂಚಿಸಲಾಯಿತು.

ಈ ಮೇಲೆ ತಿಳಿಸಿರುವ ಎಲ್ಲಾ ವಿಷಯ / ಸಮಸ್ಯೆಗಳ ಬಗ್ಗೆ ನಿಯಮಾನುಸಾರ ಅಗತ್ಯ ಕ್ರಮ ವಹಿಸಲು ಹಾಗೂ ಮುಂದಿನ ಸಭೆಗೆ ಅನುಪಾಲನಾ ವರದಿಯೊಂದಿಗೆ ಸಂಬಂಧಪಟ್ಟ ಅಧಿಕಾರಿಗಳು ಹಾಜರಾಗಲು ಸೂಚಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು
ಹಾಗೂ ಕಿರಿಯ ಆರೋಗ್ಯ ಪರಿವೀಕ್ಷಕರು
ವಾರ್ಡ್ ಸಂಖ್ಯೆ: 194, ಗೊಟ್ಟಿಗೆರೆ.

ಪ್ರತಿಯನ್ನು:-

1. ಮಾನ್ಯ ಆಯುಕ್ತರು ರವರ ಅವಗಾಹನೆಗೆ ಸಲ್ಲಿಸಲು ಆಪ್ತ ಕಾರ್ಯಾಲಯಕ್ಕೆ ಸಲ್ಲಿಸಿದೆ.
2. ಜಂಟಿ ಆಯುಕ್ತರು (ಬೊಮ್ಮನಹಳ್ಳಿ) ರವರ ಅವಗಾಹನೆಗೆ ಸಲ್ಲಿಸಿದೆ.
3. ಉಪ ಆಯುಕ್ತರು (ಆಡಳಿತ) ರವರ ಅವಗಾಹನೆಗೆ ಸಲ್ಲಿಸಿದೆ.
4. ಮುಖ್ಯ ಅಭಿಯಂತರರು (ಬೊಮ್ಮನಹಳ್ಳಿ) ರವರ ಅವಗಾಹನೆಗೆ ಸಲ್ಲಿಸಿದೆ.
5. ಅಧೀಕ್ಷಕ ಅಭಿಯಂತರರು (ಬೊಮ್ಮನಹಳ್ಳಿ) ರವರ ಅವಗಾಹನಗೆ ಸಲ್ಲಿಸಿದೆ.
6. ಕಾರ್ಯಪಾಲಕ ಅಭಿಯಂತರರು, ಬಿಬಿಎಂಪಿ, ಗೊಟ್ಟಿಗೆರೆ ರವರಿಗೆ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು, (ಬಿ.ಡಬ್ಲ್ಯೂ.ಎಸ್.ಎಸ್.ಬಿ), ಗೊಟ್ಟಿಗೆರೆ ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸದೆ.
8. ಸಹಾಯಕ ನಿರ್ದೇಶಕರು (ಪಶುಪಾಲನೆ), ಗೊಟ್ಟಿಗೆರೆ ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸದೆ.
9. ಕಾರ್ಯಪಾಲಕ ಅಭಿಯಂತರರು, ವಿದ್ಯುತ್ (ಬೊಮ್ಮನಹಳ್ಳಿ) ವಲಯ ಬಿಬಿಎಂಪಿ.
10. ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ.
11. ಕಾರ್ಯಪಾಲಕ ಅಭಿಯಂತರರು, ರಸ್ತೆ ಮತ್ತು ಮೂಲಭೂತ ಸೌಕರ್ಯಗಳು, ಬಿಬಿಎಂಪಿ
12. ಕಾರ್ಯಪಾಲಕ ಅಭಿಯಂತರರು, ಕೆರೆಗಳ ವಿಭಾಗ ಬಿಬಿಎಂಪಿ.
13. ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ ವಿಭಾಗ ಬಿಬಿಎಂಪಿ.
14. ತೋಟಗಾರಿಕೆ ಅಧೀಕ್ಷಕರು, ಬೊಮ್ಮನಹಳ್ಳಿ ವಲಯ.
15. ಆರೋಗ್ಯ ವೈದ್ಯಾಧಿಕಾರಿಗಳು, ಬೊಮ್ಮನಹಳ್ಳಿ ವಲಯ.
16. ಆರೋಗ್ಯ ವೈದ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ.
17. ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ನಿರ್ವಹಣಾ ವಿಭಾಗ.
18. ಸಹಾಯಕ ಕಂದಾಯ ಅಧಿಕಾರಿ ಅಂಜನಾಪುರ ವಿಭಾಗ.
19. ಕಲ್ಯಾಣಾಧಿಕಾರಿಗಳು ಬೊಮ್ಮನಹಳ್ಳಿ ವಲಯ.
20. ಉಪವಲಯ ಅರಣ್ಯ ಸಂರಕ್ಷಣಾಧಿಕಾರಿಗಳು, ಬೊಮ್ಮನಹಳ್ಳಿ ವಲಯ.
21. ಪೋಲೀಸ್ ಇನ್ಸ್ಪೆಕ್ಟರ್, ಹುಳಿಮಾವು ಮತ್ತು ಕೋಣನಕುಂಟೆ ಪೋಲೀಸ್ ಠಾಣೆ.
22. ಕಂದಾಯ ಅಧಿಕಾರಿಗಳು, ಅಂಜನಾಪುರ ಉಪ ವಲಯ.
23. ಸ್ಥಳೀಯ ನಾಗರಿಕ ಕಲ್ಯಾಣ ಸಂಸ್ಥೆಗಳು.

Scanned by CamScanner